# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,

## ಶಹಾಪೂರ

PW.1

## Crl. Misc.178/2024

| | | |
|---|---|---|
| ಹೆಸರು | ಃ | ಶ್ರೀಮತಿ ಹೇಮಾ |
| ಗಂಡನ ಹೆಸರು | ಃ | ಯಮನಪ್ಪ ಪ್ಯಾಟಿ |
| ವಯಸ್ಸು | ಃ | 34 ವರ್ಷ |
| ಉದ್ಯೋಗ | ಃ | ಗೃಹಿಣಿ |
| ವಾಸ | ಃ | ಅಣಬಿ ಗ್ರಾಮ, ತಾಃ ಶಹಾಪೂರ |

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 09-07-2025**

**ಮುಖ್ಯ ವಿಚಾರಣೆ ಃ ಅರ್ಜಿದಾರ ಪರ ಮಾನ್ಯ ವಕೀಲರಿಂದ**

ನನ್ನ ಮತ್ತು ಎದುದಾರನ ಮದುವೆಯು ಈಗ್ಗೆ 14 ವರ್ಷಗಳ ಹಿಂದೆ ತರ್ಕಾಸ್ ಪೇಟ ಗ್ರಾಮದಲ್ಲಿ ಗುರು ಹಿರಿಯರ ಸಮಕ್ಷಮ ನಮ್ಮ ಕುಲ ಪದ್ದತಿಯಂತೆ ನಡೆದಿರುತ್ತದೆ. ನಾನು ಹಾಗೂ ಎದುರುದಾರರು ಸುಮಾರು 12 ವರ್ಷಗಳ ಕಾಲ ಅನ್ಯೋನ್ಯವಾದ ವೈವಾಹಿಕ ಜೀವನವನ್ನು ನಡೆಸಿದ್ದು ಕಳೆದ 2 ವರ್ಷಗಳಿಂದ ಎದುರುದಾರರು ಕೆಟ್ಟ ಚಟಗಳನ್ನು ಕಲಿತು ನನ್ನ ಜೊತೆ ಜಗಳ ಮಾಡಿ ಹೊಡೆ ಬಡೆ ಮಾಡಿ ನನ್ನನ್ನು ತಮ್ಮ ಮನೆಯಿಂದ ಹೊರ ಹಾಕಿರುತ್ತಾರೆ ಹಾಗೂ ಹೆಚ್ಚಿನ ವರದಕ್ಷಿಣೆ ತಂದರುವುದಿಲ್ಲ ಎಂದು ದೈಹಿಕ ಹಾಗೂ ಮಾನಸಿಕ ಹಿಂಸೆ ಮಾಡಿರುತ್ತಾರೆ.

2. ಕಳೆದ 2 ವರ್ಷಗಳಿಂದ ನಾನು ನನ್ನ ತವರು ಮನೆಯಲ್ಲಿ ವಾಸ ಮಾಡುತ್ತಿದ್ದು, ಎದುರುದಾರರ ಇಲ್ಲಿವರೆಗೆ ನನಗೆ ಯಾವುದೇ ಜೀವನೋಪಾಯವನ್ನು ಮಾಡಿಕೊಟ್ಟಿರುವುದಿಲ್ಲ ಹಾಗೂ ನನ್ನನ್ನು ನಿರ್ಲಕ್ಷ್ಯ ಮಾಡುತ್ತಾ ಬಂದಿರುತ್ತಾರೆ.

3. ದಿಃ 19-02-2024 ರಂದು ಎದುರುದಾರರು ನನಗೆ ತಿಳಿಯದೇ ಎರಡನೇ ಮದುವೆ ಆಗಿರುತ್ತಾರೆ. ನಮ್ಮ ಊರಿನವರು ಎದುರುದಾರರು ಸದರಿ 2ನೇ ಮದುವೆಯಾಗಿದ್ದರ ಬಗ್ಗೆ ನನಗೆ ತಿಳಿಸಿರುತ್ತಾರೆ.

4. ಎದುರುದಾರರು ತರ್ಕಾಸ್ ಪೇಟ್ ಗ್ರಾಮದಲ್ಲಿ ಸ.ನಂ. 210 ಕ್ಷೇತ್ರ 2 ಎಕರೆ ಹಾಗೂ ಸುಗೂರು ಗ್ರಾಮದಲ್ಲಿ ಸ.ನಂ. 128 ಕ್ಷೇತ್ರ 6 ಎಕರೆ 13 ಗುಂಟೆ ನೀರಾವರಿ ಜಮೀನುಗಳನ್ನು ಹೊಂದಿದ್ದು, ಎಲ್ಲಾ ಖರ್ಚು ವೆಚ್ಚನ್ನು ತೆಗೆದು ಅವರು ವರ್ಷಕ್ಕೆ ರೂ.8,00,000/- ಗಳ ಆದಾಯವನ್ನು ಹೊಂದಿರುತ್ತಾರೆ. ಅಲ್ಲದೇ ಎದುರುದಾರರು ಖಾಸಗಿಯಾಗಿ ಚಾಲಕ ಎಂದು ಕೆಲಸ ಮಾಡುತ್ತಿದ್ದು ಪ್ರತಿ ತಿಂಗಳು ರೂ.20,000/- ಗಳ ಆದಾಯವನ್ನು ಹೊಂದಿದ್ದು ನನಗೆ ಪ್ರತಿ ತಿಂಗಳು ರೂ.10,000/- ಗಳ ಜೀವನಾಂಶವನ್ನು ಕೊಡುವ ಅರ್ಹತೆಯನ್ನು ಹೊಂದಿರುತ್ತಾರೆ

5. ಎದುರುದಾರರು ತಮ್ಮ ತಕರಾರು ಅರ್ಜಿಯಲ್ಲಿ ನನ್ನ ಬಗ್ಗೆ ಉಲ್ಲೇಖ ಮಾಡಿರುವ ಎಲ್ಲಾ ವಿಚಾರಗಳು ಸುಳ್ಳಾಗಿರುತ್ತವೆ ಹಾಗೂ ಅವರ ಎಲ್ಲಾ ತಕರಾರುಗಳು ಸುಳ್ಳಿನಿಂದ ಕೂಡಿರುತ್ತವೆ ಆದ್ದರಿಂದ ನನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸನ್ 2023-24 ನೇ ಸಾಲಿನ ಸ.ನಂ. 128 ರ RTC ನ್ನು ನಿಪಿ.1, ಸನ್ 2023-24 ನೇ ಸಾಲಿನ ಸ.ನಂ. 210/2 ರ RTC ನ್ನು ನಿಪಿ.2 ಎಂದು ಗುರುತಿಸಲಾವು.

**ಪಾಟಿ ಸವಾಲುಃ ಎದುರುದಾರರು ಹಾಗೂ ಅವರ ಪರ ಮಾನ್ಯ ವಕೀಲರು ಗೈರು ಹಾಜರಿದ್ದರಿಂದ ಸಾಕ್ಷಿಯ ಪಾಟಿ ಸವಾಲಿಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು.

ಪ್ರ.ದ.ನ್ಯಾ.ದಂ. ಶಹಾಪೂರ.